ಮತ್ತು ೧೦೧/೮೨ ರಂತೆ ಮೊಖದ್ದಮೆಗಳನ್ನು ದಾಖಲು ಮಾಡಿರುತ್ತಾರೆ. (ಹೆಚ್‌ಡಿ ೪೮ ಕೆಡಬ್ಲ್ಯೂಪಿ ೮೫, ದಿನಾಂಕ ೮-೯-೧೯೮೬, ೯-೩-೧೯೮೭ ಮತ್ತು ೨೮-೭-೧೯೮೭)

೩೦ ದಿನಾಂಕ ೧೯-೧೦-೧೯೮೪ ರಂದು ಮುಂಡಗಿ ವಿಚಾರದಲ್ಲಿ ನಡೆದ ಗಲಭೆಯ ಸಂಬಂಧವಾಗಿ ಮುಂಡಗಿ ಪೋಲೀಸ್ ಠಾಣೆಯವರು ಅಪರಾಧಿಗಳ ವಿರುದ್ಧ ಕ್ರೈಂ. ನಂ. ೮೦/೮೪ ಕಲಂ.. ೧೪೩,೧೪೭,೧೪೮,೩೨೪,೩೨೬,೩೩೨,೩೦೭ ೪೨೭ ರೆ/ವಿ ೧೪೯ ಐಪಿಸಿ ಮೊಖದ್ದಮೆ ದಾಖಲು ಮಾಡಿರುತ್ತಾರೆ. (ಪಿ.ಸಿ. ನಂ. ೨೧೮/೮೫) ಹೆಚ್‌ಡಿ ೫೦ ಕೆಡಬ್ಲ್ಯೂಪಿ ೮೫, ದಿನಾಂಕ ೯-೨-೧೯೮೭.

೩೧ ದಿನಾಂಕ ೧೧-೧೧-೧೯೮೩ ರಂದು ರಾಯಚೂರು ಟೌನ್‌ನಲ್ಲಿ ನಡೆದ ಗಲಭೆಯ ಸಂಬಂಧವಾಗಿ ರಾಯಚೂರು ಪಶ್ಚಿಮ ಪೋಲೀಸ್ ಠಾಣೆಯವರು ಅಪರಾಧಿಗಳ ವಿರುದ್ಧ ಕ್ರೈಂ ನಂ. ೧೦೬/೮೩ ಮೊಖದ್ದಮೆ ದಾಖಲು ಮಾಡಿರುತ್ತಾರೆ. (ಸಿ.ಸಿ. ನಂ. ೧/೮೫) ಎಚ್‌ಡಿ. ೫೧ ಕೆಡಬ್ಲ್ಯೂಪಿ ೮೫ ದಿನಾಂಕ ೬-೬-೧೯೮೭.

೩೨ ದಿನಾಂಕ ೧೨-೧೧-೧೯೮೪ ರಂದು ಕರ್ನಾಟಕ ರಾಜ್ಯ ಸ್ಟೈಪಂಡರಿ ಪದವಿಧರರ ಸಂಘದವರು ನಡೆಸಿದ ಗಲಭೆಯ ಸಂಬಂಧವಾಗಿ ಬೆಂಗಳೂರುನಗರದ ಹೈಗ್ರೌಂಡ್ ಪೋಲೀಸ್ ಠಾಣೆಯವರು ಅಪರಾಧಿಗಳ ವಿರುದ್ಧ ಕ್ರೈಂ ನಂ. ೪೪೬/೮೪ ಮೊಖದ್ದಮೆಯನ್ನು ದಾಖಲು ಮಾಡಲಾಗಿರುತ್ತದೆ. (ಸಿ.ಸಿ. ನಂ. ೪೮೪೫/೮೪ ಎಚ್‌ಡಿ. ೭೪ ಕೆಡಬ್ಲ್ಯೂಪಿ ೮೪, ದಿನಾಂಕ ೮-೧೦-೧೯೮೭.

೩೩ ದಿನಾಂಕ ೧೭-೧೧-೧೯೮೩ ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ನಡೆದ ಗಲಭೆಯ ಸಂಬಂಧದಲ್ಲಿ ಹುಬ್ಬಳ್ಳಿ ಘಂಟಿಕೇರಿ ಪೋಲೀಸ್ ಠಾಣೆಯವರು ಅಪರಾಧಿಗಳ ವಿರುದ್ಧ ಕ್ರೈಂ. ನಂ. ೩೨೪/೮೩ ಮತ್ತು ಕ್ರೈಂ. ನಂ. ೧೪೦/೮೩ ಮೊಖದ್ದಮೆಗಳನ್ನು ದಾಖಲು ಮಾಡಿರುತ್ತಾರೆ (ಸಿ.ಸಿ. ನಂ. ೧೫/೮೪, ಮತ್ತು ೧೬೬೪/೮೪) ಹೆಚ್‌ಡಿ. ೭೯ ಕೆಡಬ್ಲ್ಯೂಪಿ ೮೫, ದಿನಾಂಕ ೧೦-೨-೧೯೮೭.

ಪೋಲೀಸ್ ನೌಕರರ ಮಾಹಿತಿಯ ಬಗ್ಗೆ ಹಾಗೂ ಅಪಘಾತಗಳು ಕುರಿತಂ

೯೦೦. ಶ್ರೀ ಎನ್.ಎಂ. ಅಡ್ಕಂತಾಯ (ಸುರತ್ಕಲ್).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪೊಲೀಸರ ಸಂಖ್ಯೆ ಎಷ್ಟು ?

ಆ) ಆ ಪೈಕಿ ಅಧಿಕಾರಿಗಳ ಸಂಖ್ಯೆ ಎಷ್ಟು ?

ಇ) ರಾಜ್ಯದ ಜನಸಂಖ್ಯೆ ಹಾಗೂ ಪೋಲೀಸರ ಮಧ್ಯದ ಅನುಪಾತ ಎಷ್ಟು ?